# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1518+1520 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/03/2025 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಡ ಕಟ್ಟಡ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆ ನೀಡಲು KTPP ACT, 1999 ಮತ್ತು 2000 ಉಲ್ಲಂಘಿಸಿ ಯಾವುದೇ ಸಿಬ್ಬಂದಿ, ಆಸ್ಪತ್ರೆ, ಹೊಂದಿಲ್ಲದ ಕೇವಲ 3 ಬೆಡ್ ರೂಮ್ ಮನೆಯ ವಿಳಾಸದಲ್ಲಿರುವ ಬ್ಲಾಸಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ರವರಿಗೆ ಟೆಂಡರ್ ನೀಡಿರುವ ಬಗ್ಗೆ ಸರ್ಕಾರದ ನಿಲುವೇನು; | ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಡ ಕಟ್ಟಡ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆ ನೀಡಲು ಕೆಟಿಪಿಪಿ ಕಾಯ್ದೆ, 1999 ಅನ್ನು ಉಲ್ಲಂಘಿಸಿರುವುದಿಲ್ಲ.<br><br>03 ಕೊಠಡಿಗಳ ಮನೆಯ ವಿಳಾಸದಲ್ಲಿರುವ ಆಸ್ಪತ್ರೆಗೆ ಸಂಬಂಧಿಸಿದಂತೆ ಮಂಡಳಿಯಿಂದ ಯಾವುದೇ ಟೆಂಡರ್ ನೀಡಿರುವುದಿಲ್ಲ. |
| ಆ) | ಯಾವುದೇ ಅನುಭವ ಸೌಲಭ್ಯಗಳು ಇಲ್ಲದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP: 13046/2024 ಇನ್ನೂ ತೀರ್ಮಾನಕ್ಕೆ ಬಾಕಿ ಇದೆ, ಆದರೂ ತರಾತುರಿಯಲ್ಲಿ Blossom Multispecialty Hospital ಗೆ 100 MMU Operation & Management ಗೆ ಕಾರ್ಯಾದೇಶ ನೀಡಿರುವುದರ ಉದ್ದೇಶವೇನು; ಈ ಭ್ರಷ್ಟಾಚಾರದ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ. 13046 /2024 ರಲ್ಲಿ ಮಂಡಳಿಯಿಂದ ಕರೆಯಲಾದ ಈ ಕೆಳಕಂಡ 03 ಟೆಂಡರ್ ಗಳನ್ನು ಪ್ರಶ್ನಿಸಲಾಗಿರುತ್ತದೆ.<br><br>**ಎ)** ದಿನಾಂಕ: 02-03-2024 ರಂದು 100 ಸಂಚಾರಿ ಆರೋಗ್ಯ ಘಟಕಗಳ ವಾಹನಗಳ ಖರೀದಿಗಾಗಿ ಕರೆದ ಟೆಂಡರ್<br><br>**ಬಿ)** ದಿನಾಂಕ: 07-03-2024 ರಂದು 100 ಸಂಚಾರಿ ಆರೋಗ್ಯ ಘಟಕಗಳ ನಿರ್ವಹಣೆಗಾಗಿ ಕರೆದ ಟೆಂಡರ್.<br><br>**ಸಿ)** ದಿನಾಂಕ: 12-03-2024 ರಂದು ಸಂಚಾರಿ ಆರೋಗ್ಯ ಘಟಕಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಹಾಗೂ ತಂತ್ರಾಂಶವನ್ನು ಅಳವಡಿಸಲು ಕರೆದ ಟೆಂಡರ್. |

| | | |
|---|---|---|
| | | ಈ ರಿಟ್ ಅರ್ಜಿಯಲ್ಲಿ ಮಂಡಳಿಯ ವಿರುದ್ಧ ಯಾವುದೇ ತಡೆಯಾಜ್ಞೆ, ನಿರ್ದೇಶನ ಅಥವಾ ನಿರ್ಬಂಧವನ್ನು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಿರುವುದಿಲ್ಲ. ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ರಿಟ್ ಅರ್ಜಿಯಲ್ಲಿ ಯಾವುದೇ ಆಸ್ಪತ್ರೆಯ ಉಲ್ಲೇಖವಿರುವುದಿಲ್ಲ. ದಿನಾಂಕ: 12-07-2024 ರ ನಂತರ ಈ ಪ್ರಕರಣದಲ್ಲಿ ವಿಚಾರಣೆ ನಡೆದಿರುವುದಿಲ್ಲ. |
| ಇ) | ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಡ ಕಟ್ಟಡ ಕಾರ್ಮಿಕರಿಗೆ Preventive Health Care Check Up ಕರೆದ ಟೆಂಡರ್ ನಲ್ಲಿ ತಮಗೆ ಬೇಕಾದ 08 ಸಂಸ್ಥೆಗಳಿಗೆ ಮಾತ್ರವೇ ಭಾಗವಹಿಸಲು ಅನುಮತಿ ನೀಡಿ 650 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಭ್ರಷ್ಟಾಚಾರವೆಸಗಿರುವ ಬಗ್ಗೆ ಸರಕಾರದ ನಿಲುವೇನು;. | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗು ಅವರ ಅವಲಂಭಿತರಿಗೆ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವ ಪ್ರಿವೆಂಟಿವ್ ಹೆಲ್ತ್ ಕೇರ್ ಯೋಜನೆಯನ್ನು 2021-22ನೇ ಸಾಲಿನಿಂದ ವಿವಿಧ ಹಂತದಲ್ಲಿ ಅನುಷ್ಠಾನ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.<br><br>ದಿನಾಂಕ: 29-07-2022 ರಂದು ಹಾಗೂ 08-09-2022 ರಂದು ಇ-ಪ್ರೋಕ್ಯೂರ್ ಮೆಂಟ್ ಪೋಟರ್ಲ್ ನಲ್ಲಿ ಮುಕ್ತ ಟೆಂಡರ್ ಕರೆದು ಪಾರದರ್ಶಕವಾಗಿ 08 ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಿಕೊಳ್ಳಲಾಗಿದ್ದು, ಸದರಿ 08 ಸಂಸ್ಥೆಗಳ ಮೂಲಕ 2022-23 ರಲ್ಲಿ 05 ಉಪ ವಿಭಾಗಗಳಲ್ಲಿ, 2023-24 ರಲ್ಲಿ 37 ಉಪ ವಿಭಾಗಗಳಲ್ಲಿ ಹಾಗೂ 2024-25 ರಲ್ಲಿ 06 ಉಪ ವಿಭಾಗಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗಿರುತ್ತದೆ. 08 ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಿಕೊಳ್ಳುವಾಗ ಅರ್ಹತಾ ಮಾನದಂಡಗಳನ್ನು ನಿಗಧಿಪಡಿಸಿ, ಮುಕ್ತ ಟೆಂಡರ್ ಕರೆಯಲಾಗಿದ್ದು, ಅರ್ಹತಾ ಮಾನದಂಡಗಳನ್ನು ಪೂರೈಸುವ ಎಲ್ಲಾ ಸಂಸ್ಥೆಗಳಿಗೆ ಈ ಟೆಂಡರ್ ಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಎಂಪ್ಯಾನಲ್ ಮೆಂಟ್ ಗೆ ಟೆಂಡರ್ ಅನ್ನು ಕರೆದಾಗ ಒಟ್ಟು 37 ಸಂಸ್ಥೆಗಳು ಭಾಗಿಯಾಗಿದ್ದು, ಇದರಲ್ಲಿ ಎಲ್ಲಾ ಅರ್ಹತಾ ಮಾನದಂಡಗಳನ್ನು ಪೂರೈಸಿದ 08 ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಿಕೊಳ್ಳಲಾಗಿರುತ್ತದೆ. 2024-25 ನೇ ಸಾಲಿನಲ್ಲಿ ಕಾರ್ಯಾದೇಶವನ್ನು ನೀಡಿದ 25 ಟೆಂಡರ್ ಗಳ ಪೈಕಿ 6 ಟೆಂಡರ್ ಗಳನ್ನು ಎಂಪ್ಯಾನಲ್ ಆದ ಸಂಸ್ಥೆಗಳ ಮೂಲಕ ಮತ್ತು 19 ಟೆಂಡರ್ ಗಳನ್ನು ಮುಕ್ತ ಟೆಂಡರ್ ಕರೆದು ಸಂಸ್ಥೆಗಳನ್ನು ಆಯ್ಕೆ |

| | | |
|---|---|---|
| | | ಮಾಡಿಕೊಳ್ಳಲಾಗಿರುತ್ತದೆ. ಒಟ್ಟಾರೆಯಾಗಿ ಈ ಯೋಜನೆಯ ಅನುಷ್ಠಾನದಲ್ಲಿ 23 ಸಂಸ್ಥೆಗಳು ಕಾರ್ಯಾದೇಶವನ್ನು ಪಡೆದಿರುತ್ತವೆ.<br><br>ಭಾರತೀಯ ವೈದ್ಯಕೀಯ ಮಂಡಳಿಯು ನಿಗಧಿಪಡಿಸಿದ ಎಲ್ಲಾ ಮಾನದಂಡಗಳನ್ನು ಪಾಲಿಸಿ, ವೈದ್ಯಕೀಯ ಪರೀಕ್ಷೆಗಳಿಗಾಗಿ ಕಾರ್ಮಿಕರ ಸ್ಯಾಂಪಲ್ಸ್ ಅನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ನಿಯಮಾನುಸಾರ ಮಾದರಿಗಳ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ. ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾದ ಎಲ್ಲಾ ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ವೈದ್ಯಕೀಯ ವರದಿಗಳನ್ನು ನೀಡಿರುವುದನ್ನು ಖಾತರಿ ಪಡಿಸಿಕೊಳ್ಳಲಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮಂಡಳಿಯಿಂದ ನಡೆಸಲಾದ ವೈದ್ಯಕೀಯ ಪರೀಕ್ಷೆಗಳ ವರದಿಗಳನ್ನು ಮಂಡಳಿಯಲ್ಲಿ ನಿರ್ವಹಿಸಲಾಗಿರುತ್ತದೆ. ಇದಲ್ಲದೇ, ಸಂಸ್ಥೆಗಳು ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದ ಬಗ್ಗೆ ಕ್ಷೇತ್ರ ಮಟ್ಟದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಧೃಡೀಕರಿಸಿರುತ್ತಾರೆ.<br><br>ಈ ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. |
| **ಈ)** | ಈ ಕುರಿತು ಮಾನ್ಯ ನ್ಯಾಯಾಲಯದಲ್ಲಿ WP 9707/2023 ಬಾಕಿ ಇದ್ದರೂ Blossom Multispecialty Hospitalಗೆ ಟೆಂಡರ್ ನೀಡಲು ಕಾರಣವೇನು; ಈ ಸಂಸ್ಥೆಯು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕಾಗಿ ನೋಟೀಸು ನೀಡಿ ದಂಡ ಕಟ್ಟಿಕೊಂಡ ಬಳಿಕವೂ ಅದೇ ಸಂಸ್ಥೆಗೆ ಟೆಂಡರ್ ನೀಡಲು ಕಾರಣವೇನು? (ವಿವರ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ. 9707/2023 ರಲ್ಲಿ ಮಂಡಳಿಯಿಂದ 2022-23 ನೇ ಸಾಲಿನಲ್ಲಿ ಪ್ರೀವೇಂಟಿವ್ ಹೆಲ್ತ್ ಕೇರ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾರ್ಮಿಕ ಇಲಾಖೆಯ ಉಪ ವಿಭಾಗವಾರು ಕರೆಯಲಾದ 33 ಟೆಂಡರ್ ಗಳನ್ನು ಪ್ರಶ್ನಿಸಿ ದಾಖಲಿಸಲಾಗಿರುತ್ತದೆ.<br><br>ಸದರಿ 33 ಟೆಂಡರ್ ಗಳಲ್ಲಿ ಮಂಡಳಿಯು ಈ ಹಿಂದೆ ಟೆಂಡರ್ ಮೂಲಕ ಎಂಪಾನಲ್ ಮಾಡಿಕೊಂಡಿದ್ದ 08 ಸಂಸ್ಥೆಗಳು ಭಾಗವಹಿಸಲು ಅವಕಾಶ ನೀಡಲಾಗಿರುತ್ತದೆ. ಈ 08 ಸಂಸ್ಥೆಗಳನ್ನು ದಿನಾಂಕ: 29-07-2022 ಹಾಗೂ 08-09-2022 ರಂದು ಮುಕ್ತ ಟೆಂಡರ್ ಮೂಲಕ ಆಯ್ಕೆ ಮಾಡಿ ಕೊಳ್ಳಲಾಗಿರುತ್ತದೆ. |

| | | |
|---|---|---|
| | | ಮಂಡಳಿಯು ಕರೆದಿರುವ 33 ಟೆಂಡರ್ ಗಳಲ್ಲಿ ಕೇವಲ 08 ಸಂಸ್ಥೆಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಈ ಟೆಂಡರ್ ಗಳು ಸೀಮಿತ ಟೆಂಡರ್ ಗಳಾಗಿರುತ್ತದೆಂದು ಈ ಕಾರಣಕ್ಕಾಗಿ ಈ ಟೆಂಡರ್ ಗಳನ್ನು ರದ್ದುಪಡಿಸಬೇಕೆಂದು ಅರ್ಜಿದಾರರು ಕೋರಿರುತ್ತಾರೆ.<br><br>ಈ ರಿಟ್ ಅರ್ಜಿಯು ವಿಚಾರಣೆ ಹಂತದಲ್ಲಿರುವಾಗ ಚುನಾವಣಾ ನೀತಿ ಸಂಹಿತೆಯು ಜಾರಿಯಾಗಿ ಟೆಂಡರ್ ಪ್ರಕ್ರಿಯೆಯು ಸ್ಥಗಿತ ಗೊಂಡಿರುತ್ತದೆ. ಇದರ ಪರಿಣಾಮವಾಗಿ ಟೆಂಡರ್ ನಲ್ಲಿ ನಿಗಧಿಪಡಿಸಿದ ಅವಧಿಯು ಮುಕ್ತಾಯವಾದ ಕಾರಣ ದಿನಾಂಕ: 15-05-2023 ರಂದು ಎಲ್ಲಾ 33 ಟೆಂಡರ್ ಗಳನ್ನು ರದ್ದು ಪಡಿಸಲಾಗಿರುತ್ತದೆ ಹಾಗೂ ಯಾವುದೇ ಕಾರ್ಯಾದೇಶವನ್ನು ಈ 33 ಟೆಂಡರ್ ಗಳ ಆಧಾರದ ಮೇಲೆ ನೀಡಲಾಗಿರುವುದಿಲ್ಲ.<br><br>ಈ ರಿಟ್ ಅರ್ಜಿಯಲ್ಲಿ ಮಂಡಳಿಯ ವಿರುದ್ಧ ಯಾವುದೇ ತಡೆಯಾಜ್ಞೆ, ನಿರ್ದೇಶನ ಅಥವಾ ನಿರ್ಬಂಧವನ್ನು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಿರುವುದಿಲ್ಲ. ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ದಿನಾಂಕ: 13-09-2023 ರ ನಂತರ ಈ ಪ್ರಕರಣದಲ್ಲಿ ಯಾವುದೇ ವಿಚಾರಣೆ ನಡೆದಿರುವುದಿಲ್ಲ. ಮಂಡಳಿಯಿಂದ ನೋಟೀಸ್ ನೀಡಿ ದಂಡ ಕಟ್ಟಿಕೊಂಡ ಬಳಿಕ ಅದೇ ಸಂಸ್ಥೆಗೆ ಕಾರ್ಯಾದೇಶ ನೀಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.<br><br>ಮಂಡಳಿಯು ಎಲ್ಲಾ 33 ಟೆಂಡರ್ ಗಳನ್ನು ರದ್ದುಪಡಿಸಿರುವುದರಿಂದ ಈ ರಿಟ್ ಅರ್ಜಿಯ ವ್ಯಾಜ್ಯ ವಿಷಯವು ಸದ್ಯ ಊರ್ಜಿತದಲ್ಲಿ ಇರುವುದಿಲ್ಲ.<br><br>ಮಂಡಳಿಯಿಂದ ನೋಟೀಸ್ ನೀಡಿ ದಂಡ ಕಟ್ಟಿಕೊಂಡ ಬಳಿಕ ಅದೇ ಸಂಸ್ಥೆಗೆ ಕಾರ್ಯಾದೇಶ ನೀಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. |

**ಕಾಇ 129 ಎಲ್ ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**